## ಸ್ಮೃತಿಸಂಚಯ

# 'ನಡೆದಾಡುವ ವಿಶ್ವನಾಥ'

ಕುಮಾರಿ ಸ್ವರ್ಣಗೌರಿ



"ಊಹು! ನಾನು ಊಟ ಮಾಡುವುದಿಲ್ಲ" ಎಂದು ತಟ್ಟೆಯ ಮುಂದೆ ಹಠ ಹಿಡಿದು ಕುಳಿತಿರುವುದು ಬಾಲಕ ನಲ್ಲ, ವೃದ್ಧ ಹಿರಿಯ ಸಂನ್ಯಾಸಿ! ಸೇವಕನು ಅನುನಯದಿಂದ ಅವರಿಗೆ ತಿನ್ನಲು ಒತ್ತಾಯಿಸು ತ್ತಿದ್ದನು. ಆದರೆ ಆ ವೃದ್ಧ ಸಂನ್ಯಾಸಿಯಾದರೋ ಹಠ ಬಿಡುವಂತೆಯೇ ಕಾಣುತ್ತಿಲ್ಲ. ಕಾರಣವೇನಿರ ಬಹುದು? ಆ ವೃದ್ಧ ಸಂನ್ಯಾಸಿಯ ಮಾತುಗಳಲ್ಲೇ ಕೇಳೋಣ. ಅವರು ಸೇವಕನಿಗೆ ಹೇಳುತ್ತಿದ್ದಾರೆ: "ಮೃತ್ಯುವಿನ ದವಡೆಯಲ್ಲಿದ್ದ ರೋಗಿನಾರಾಯಣನೊಬ್ಬ ಆಸ್ಪತ್ರೆಗೆ ಬಂದಿದ್ದಾನೆ. ಆದರೆ ಈ ಹೊತ್ತಿನಲ್ಲಿ ಆತನ ಶುಶ್ರೂಷೆ ಮಾಡಲು ಅಲ್ಲಿ ವೈದ್ಯರಾರೂ ಇಲ್ಲ. ನೀನು ಈಗಲೇ ಹೋಗಿ ಎಲ್ಲ ವ್ಯವಸ್ಥೆ ಮಾಡಿ ಬಾ."

ಸೇವಕನಿಗೋ ಸೋಜಿಗ. ಏಕೆಂದರೆ ಆ ವೃದ್ಧ ಸಾಧುವಿದ್ದ ಕೊಠಡಿ ಆಸ್ಪತ್ರೆಯ ಗೇಟಿನಿಂದ ನೂರು ಮೀಟರ್ ದೂರವಿದೆ. ನಡುವೆ ಅನೇಕ ಗಿಡಮರಗಳಿವೆ. ಅಲ್ಲಿ ನಡೆಯುತ್ತಿರುವ ವರ್ತಮಾನಗಳು ಇಲ್ಲಿ, ಇವರಿಗೆ ಹೇಗೆ ತಿಳಿಯಿತು? ಈ ವೃದ್ಧರು ಮಧ್ಯಾಹ್ನ ಹನ್ನೆರಡೂವರೆ ಗಂಟೆ ಹೊತ್ತಿಗೆ ತಮ್ಮ ಆಸ್ಪತ್ರೆಯ ಸೇವೆ ಮುಗಿಸಿ ಬಂದು, ಸ್ನಾನ ಮುಗಿಸಿ, ಊಟಕ್ಕೆ ಕುಳಿತಾಗ ಒಂದೂವರೆ ಗಂಟೆ ಯಾಗಿತ್ತು. ಅಲ್ಲದೆ ತುರ್ತುಸೇವೆಗಾಗಿ ಸದಾ ಒಬ್ಬ ವೈದ್ಯರು ಅಲ್ಲಿರುವ ವ್ಯವಸ್ಥೆಯೂ ಇದೆ. ಆದರೂ ಅವರ ಹಠಕ್ಕೆ ಮಣಿಯಲೇಬೇಕಾಗಿ ಬಂದ ಸೇವಕ ಆಸ್ಪತ್ರೆಗೆ ಓಡಿದ.

ಅದೋ! ಆಟೋರಿಕ್ಷಾದಲ್ಲಿ ರೋಗಿನಾರಾಯಣನೊಬ್ಬ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ. ಅಲ್ಲದೆ ಆ ಸಮಯದಲ್ಲಿ ಅಲ್ಲಿ ವೈದ್ಯರಾರೂ ಇರಲಿಲ್ಲ. ಸೇವಕನು ಕೂಡಲೇ ಹೋಗಿ ವೈದ್ಯರನ್ನು ಕರೆತಂದು, ಶೈತ್ಯೋಪಚಾರ ಕೊಡಿಸಿದನು. ಕ್ರಮೇಣ ರೋಗಿಯಲ್ಲಿ ಎಚ್ಚರದ ಕುರುಹುಗಳು ಕಾಣತೊಡಗಿದವು. ಇಷ್ಟೆಲ್ಲಾ ಆಗುವಾಗ ಅರ್ಧ ಗಂಟೆಯಾಯಿತು. ಸಮಾಧಾನದ ನಿಟ್ಟುಸಿರು ಬಿಡುತ್ತಾ ಸೇವಕನು ಹಿಂತಿರುಗಿ ಬಂದು ಆ ವೃದ್ಧ ಸಂನ್ಯಾಸಿಗೆ ವರದಿ ಒಪ್ಪಿಸಿದನು. ವೃತ್ತಾಂತವನ್ನೆಲ್ಲಾ ಕೇಳಿಯಾದ ಮೇಲೆ ತೃಪ್ತಿಯಿಂದ ಊಟಕ್ಕೆ ಕುಳಿತರು ಆ ವೃದ್ಧರು!

ಆದರೆ ಆಸ್ಪತ್ರೆಗೆ ಇಂತಹ ಅವೇಳೆಯಲ್ಲಿ ರೋಗಿನಾರಾಯಣ ಬಂದ ವಿಷಯವಾಗಲೀ, ವೈದ್ಯರಾರೂ ಇಲ್ಲ ಎಂಬುದನ್ನಾಗಲೀ, ಇಲ್ಲೇ ಕುಳಿತು ತಿಳಿದ ಬಗೆ ಹೇಗೆ? ಇದಕ್ಕೆ ಬುದ್ಧಿ ಅಥವಾ ತರ್ಕದಿಂದ ಉತ್ತರ ನೀಡಲಾಗದು. "ಬನಬಾಬಾ" ಎಂದು ಕರೆಯಲ್ಪಡುತ್ತಿದ್ದ ಆ ವೃದ್ಧ ಸಂನ್ಯಾಸಿಯ ವ್ಯಕ್ತಿತ್ವವು ವಿಶ್ವಚೈತನ್ಯದಲ್ಲಿ ಒಂದಾಗಿಬಿಟ್ಟಿತ್ತು ಎನ್ನುವ ಆಧ್ಯಾತ್ಮಿಕ ಉತ್ತರವೊಂದೇ ಸಾಧ್ಯ. ಇಂತಹ ಉನ್ನತ ಆಧ್ಯಾತ್ಮಿಕ ಸ್ಥಿತಿಯನ್ನು ತಲುಪಿದ, **"ನಡೆದಾಡುವ ವಿಶ್ವನಾಥ"** ಎಂದು ಕರೆಯಲ್ಪಡುತ್ತಿದ್ದ ಆ ವೃದ್ಧ ಸಂನ್ಯಾಸಿಯ ಜೀವನ ಗಾಥೆ ಒಂದು ಸುದೀರ್ಘ ಯಾತ್ರೆ.

ಪಶ್ಚಿಮ ಬಂಗಾಳದ ಮಿಡ್ನಾಪುರದಿಂದ ಕೊಲ್ಕೊತಾಗೆ ವ್ಯಾಸಂಗ ಕ್ಕಾಗಿ ಬಂದ ಬಾಲಕನ ಹೆಸರು 'ಬನಬಿಹಾರಿ.' ಬೇಲೂರು ಮಠದ ರಾಮಕೃಷ್ಣ ಮಿಷನ್ ಕೈಗೊಂಡ ಪರಿಹಾರಕಾರ್ಯದಲ್ಲಿ ಅವನ ಶಾಲೆಯ ಮಕ್ಕಳೆಲ್ಲಾ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಪರಿಹಾರ ಕಾರ್ಯ ಮುಗಿದ ಮೇಲೆ ಅದರ ವರದಿಯನ್ನು ಬೇಲೂರುಮಠಕ್ಕೆ ಒಪ್ಪಿಸಲು ಹೊರಟ ಶಾಲೆಯ ಪ್ರಾಧ್ಯಾಪಕರು ಬನಬಿಹಾರಿಯನ್ನೂ ತಮ್ಮ ಸಂಗಡ ಕರೆದೊಯ್ದರು. ಆದರೆ ಅಲ್ಲಿಯ ಆಧ್ಯಾತ್ಮಿಕ ವಾತಾವರಣವು ಬಾಲಕನ ಮನಸ್ಸನ್ನು ಅದೆಷ್ಟು ಸೂರೆಗೊಂಡಿತೆಂದರೆ ಆತ ಶಾಲೆಗೆ ಹಿಂತಿರುಗಲೇ ಇಲ್ಲ! ಕೆಲವು ಕಾಲದ ನಂತರ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಶಿವಾನಂದರು ಹುಡುಗನಿಗೆ ಬ್ರಹ್ಮಚರ್ಯ ದೀಕ್ಷೆ ನೀಡಿದರು. ಇದು ನಡೆದದ್ದು ಕ್ರಿ.ಶ. ೧೯೨೫ ರಲ್ಲಿ. ನಂತರ ಅವರನ್ನು ಬಂಗಾಳದ ಕೋಂಟಾಯ್ ನಲ್ಲಿರುವ ರಾಮಕೃಷ್ಣ ಆಶ್ರಮಕ್ಕೆ ಕಳುಹಿಸಲಾಯಿತು.

ಎರಡು ವರ್ಷಗಳ ಕಾಲ ಅಲ್ಲಿದ್ದ ಬಾಬಾ ಒಂದು ದಿನ ಇದಕ್ಕಿದ್ದಂತೆ ಮಲೇರಿಯಾಗೆ ತುತ್ತಾದರು. ಶುಶ್ರೂಷೆಗಾಗಿ ಬೇಲೂರು ಮಠಕ್ಕೆ ಬಂದ ಅವರನ್ನು ಸ್ವಾಮಿ ಶಿವಾನಂದರು, ವಾರಾಣಸಿಯ 'ರಾಮಕೃಷ್ಣ ಮಿಷನ್ ಸೇವಾಶ್ರಮ' ಕ್ಕೆ (ಉಚಿತ ಆಸ್ಪತ್ರೆ) ಕಳುಹಿಸಿದರು. ಸ್ವಲ್ಪ ಕಾಲದ ನಂತರ ಅಲ್ಲಿಗೆ ಭೇಟಿ ನೀಡಿದ ಸ್ವಾಮಿ ಶಿವಾನಂದರು ಗುಣಮುಖನಾದ ಬಾಬಾನನ್ನು ನೋಡಿ ಸಂತುಷ್ಟರಾಗಿ ಸಂನ್ಯಾಸ ದೀಕ್ಷೆ ನೀಡಿ, 'ಸ್ವಾಮಿ ಮುಕ್ತಾನಂದ' ಎಂಬ ಹೊಸ ಹೆಸರು ನೀಡಿ ದರು. "ನೀನು ವಾರಾಣಸಿಯಲ್ಲಿಯೇ ಇದ್ದು ರೋಗಿ ನಾರಾಯಣರ ಸೇವೆ ಮಾಡು. ಭಿಕ್ಷೆಗಾಗಿ ಮನೆಮನೆಗೆ ಹೋಗಬೇಕಾಗುವುದು. ಆಗ ಈ ಕಾವಿ ಬಟ್ಟೆ ಸಹಾಯಕ್ಕೆ ಬರುವುದು" ಎಂದು ಹೇಳಿ ಕಾಷಾಯ ವಸ್ತ್ರ ನೀಡಿದರು. ಕ್ರಿ.ಶ. ೧೯೨೯ ರಲ್ಲಿ ಬಾಬಾ ಮತ್ತೊಂದು

---

*ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಉತ್ತಮ ಬರಹಗಾರರು ಮತ್ತು ಭಾಷಣಗಾರರು ಆಗಿದ್ದಾರೆ.*

ಮರಣಾಂತಿಕ ಖಾಯಿಲೆಗೆ ತುತ್ತಾದರು. ಆಗ ಅವರನ್ನು ವಿಶೇಷ ಶುಶ್ರೂಷೆಗಾಗಿ ಈಗಿನ ಬರ್ಮಾದಲ್ಲಿರುವ ರಂಗೂನಿನ ರಾಮಕೃಷ್ಣ ಮಿಷನ್ ಆಸ್ಪತ್ರೆಗೆ ಕಳುಹಿಸಲಾಯಿತು. ಆಗಿನ ಕಾಲಕ್ಕೆ ಅದು ಅತ್ಯಂತ ಆಧುನಿಕ ಆಸ್ಪತ್ರೆಯೆಂದು ಹೆಸರಾಗಿತ್ತು. ಶುಶ್ರೂಷೆಗೆಂದು ಹೋದ ಬಾಬಾ ಅಲ್ಲಿ ರೋಗಿಗಳ ಗಾಯಕ್ಕೆ ಕಟ್ಟುಹಾಕುವುದು, ಔಷಧಿ ನೀಡುವುದು ಮುಂತಾದ ಅನೇಕ ವೈದ್ಯಕೀಯ ಸೇವಾಕಾರ್ಯಗಳನ್ನು ಕಲಿತುಕೊಂಡರು. ಈ ತಿಳಿವಳಿಕೆ ಮುಂದೆ ರೋಗಿಗಳ ಸೇವೆಗೆ ಜೀವನದುದ್ದಕ್ಕೂ ಅವರಿಗೆ ಉಪಯೋಗಕ್ಕೆ ಬಂದಿತು. ಶುಶ್ರೂಷೆಯ ನಂತರ ಹಿಮಾಲಯ ಯಾತ್ರೆ ಮುಗಿಸಿ ಕ್ರಿ.ಶ. ೧೯೩೨ ರಲ್ಲಿ ವಾರಾಣಸಿಗೆ ಹಿಂತಿರುಗಿದ ಬಾಬಾ ಕ್ರಿ.ಶ. ೧೯೬೭ ರವರೆಗೆ ಅಂದರೆ, ತಮ್ಮ ಜೀವಿತದ ಕೊನೆಯವರೆಗೂ ಅಲ್ಲಿಯೇ ಇದ್ದರು. ಆ ಸಮಯದಲ್ಲಿ ವಾರಾಣಸಿ ಆಸ್ಪತ್ರೆಯ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು. ಶುಶ್ರೂಷೆಗಾಗಿ ಬರುತ್ತಿದ್ದ ಜನಗಳ ಸಂಖ್ಯೆ ಅಪಾರ. ಆದರೆ ಸೇವೆ ನೀಡುವ ವೈದ್ಯರ ಸಂಖ್ಯೆ ಕಡಿಮೆ. ಆದ್ದರಿಂದ ಸಂನ್ಯಾಸಿಗಳೇ ಬಹುತೇಕ ಕಾರ್ಯವನ್ನು ಮಾಡುತ್ತಿದ್ದರು. ಆರ್ಥಿಕ ಅಡಚಣೆಯಿಂದಾಗಿ ಸಾಧುಗಳಿಗೆ ಬೆಳಗಿನ ಉಪಾಹಾರವೂ ಇರುತ್ತಿರಲಿಲ್ಲ. ದಿನಕ್ಕೆ ಎರಡು ಊಟ. ಅದೂ ಸ್ವಲ್ಪ ಅನ್ನ, ಒಂದು ತರಕಾರಿ ಪಲ್ಯ, ಬೇಳೆಯ ನೀರು, ಅಷ್ಟೆ. ಆದರೆ ದೈಹಿಕ ಪರಿಶ್ರಮವೋ ವಿಪರೀತ. ಅದರಲ್ಲೂ ಈ ಯುವ ಸಾಧುವಿಗೆ ಹಸಿವೆ ಇಂಗುತ್ತಲೇ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲೂ, "ಶರೀರದ ಬಗ್ಗೆ ಗಮನ ನೀಡಲೂ ಸಹ ಸಮಯವೇ ಇರುತ್ತಿರಲಿಲ್ಲ, ಆ ದಿನಗಳನ್ನು ಆನಂದದಿಂದ ಕಳೆಯುತ್ತಿದ್ದೆವು" ಎನ್ನುತ್ತಾರೆ ಬಾಬಾ.

ಮನೆಮನೆಗೆ ಭಿಕ್ಷೆಗೆ ಹೋಗುವುದು ಬಹಳ ಕಷ್ಟದ ಕೆಲಸವಾಗಿತ್ತು. ಭಿಕ್ಷೆ ಬೇಡುವುದು ಹೇಗೆಂದು ಒಬ್ಬರು ಹಿರಿಯ ಸಾಧುಗಳು ಹೇಳಿಕೊಟ್ಟರು, "ತೆಗೆದುಕೋ, ಈ ಪುಸ್ತಕದಲ್ಲಿ ಭಿಕ್ಷೆ ನೀಡುವವರ ಮನೆಯ ವಿಳಾಸ ಹಾಗೂ ತಾರೀಖುಗಳಿವೆ. ಆ ಮನೆಗಳಿಗೆ ಹೋಗಿ, 'ಅಮ್ಮಾ ನಾನು ಸೇವಾಶ್ರಮದಿಂದ ಭಿಕ್ಷೆಗಾಗಿ ಬಂದಿದ್ದೇನೆ, ಭಿಕ್ಷೆ ನೀಡಿ' ಎಂದು ಕೂಗಿದರೆ, ಅವರು ಒಂದು ಹಿಡಿ ಭಿಕ್ಷೆ ನೀಡುತ್ತಾರೆ. ಈ ಚೀಲ ತುಂಬುವವರೆಗೂ ಭಿಕ್ಷೆ ಬೇಡು" ಎಂದರು. ಹೀಗೆ ಬಾಬಾ ತಮ್ಮ ಮೊದಲ ಭಿಕ್ಷಾಟನೆ ಪ್ರಾರಂಭಿಸಿದರು. ದಿನಕ್ಕೆ ೭೦-೮೦ ಕೆ.ಜಿ. ಭಿಕ್ಷೆ ಹೊತ್ತುಕೊಂಡು ಹಿಂತಿರುಗುತ್ತಿದ್ದರು. ಕೊನೆಯ ಮನೆ ಎಂಟೋ, ಒಂಭತ್ತೋ ಕಿ.ಮೀ. ದೂರದಲ್ಲಿರುತ್ತಿತ್ತು. ಒಂದು ದಿನ ಬೇಸಿಗೆಯ ಬಿಸಿಲಿನಲ್ಲಿ, ಭಾರವಾದ ಚೀಲ ಹೊತ್ತು ನಡೆದು ಬರುತ್ತಿರುವಾಗ, ಸುಸ್ತಾಗಿ ಆಸ್ಪತ್ರೆಯ ಕಛೇರಿಯ ಬಾಗಿಲ ಬಳಿ ಬಂದು, ಪ್ರಜ್ಞೆ ತಪ್ಪಿ ಬಿದ್ದರು. ಅವರನ್ನು ಯಾರೂ ಗಮನಿಸಲೇ ಇಲ್ಲ. ಕಛೇರಿಯ ಬಾಗಿಲು ತೆರೆಯಲು ಬಂದ ಗುಮಾಸ್ತನು ನೋಡಿ ಇವರನ್ನು ಎಬ್ಬಿಸಿ, ಊಟಮಾಡಲು ಕಳುಹಿಸಿದನು.

ವಾರಾಣಸಿಯ ಆಸ್ಪತ್ರೆಯಲ್ಲಿ 'ರೋಗಿ' ಎಂದು ಕರೆಯುವುದು ನಿಷಿದ್ಧವಾಗಿತ್ತು. ಎಲ್ಲರೂ ರೋಗಿಗಳನ್ನು 'ನಾರಾಯಣ' ಎಂದೇ ಕರೆಯುತ್ತಿದ್ದರು. ಪಕ್ಕದಲ್ಲೇ ಇದ್ದ "ರಾಮಕೃಷ್ಣ ಅದ್ವೈತ ಆಶ್ರಮ"ದಲ್ಲಿ ಶ್ರೀರಾಮಕೃಷ್ಣರ ಪೂಜೆ ನಡೆಯುತ್ತಿತ್ತು. ಆ ದಿನಗಳಲ್ಲಿ ಪ್ರಚಲಿತವಿದ್ದ ಒಂದು ಸುಪ್ರಸಿದ್ಧ ಹೇಳಿಕೆಯೆಂದರೆ, "ಅದ್ವೈತ ಆಶ್ರಮದಲ್ಲಿ ಠಾಕೂರರನ್ನು (ಶ್ರೀರಾಮಕೃಷ್ಣರನ್ನು) ವಿಗ್ರಹದಲ್ಲಿ ಪೂಜಿಸಿದರೆ, ಸೇವಾಶ್ರಮದಲ್ಲಿ ಠಾಕೂರರನ್ನು ಮಾನವರೂಪದಲ್ಲಿ ಪೂಜಿಸಲಾಗುತ್ತಿದೆ." ಆದರೆ ಈ ಜೀವಂತ ದೇವರನ್ನು ಪೂಜಿಸುವುದು ಸುಲಭದ ಮಾತೇನೂ ಆಗಿರಲಿಲ್ಲ. ಗುಡಿಯಲ್ಲಿನ ಭಗವಂತ ಮಾತನಾಡುವುದಿಲ್ಲ. ಆದರೆ ಈ ನಾರಾಯಣರಾದರೋ ಸೇವೆ ಮಾಡುವವರನ್ನೇ ಕೆಲವೊಮ್ಮೆ ಹೊಡೆಯುತ್ತಿದ್ದರು, ಹೀನಾಯವಾಗಿ ಬೈಯುತ್ತಿದ್ದರು, ಹೇಳಿದ ಮಾತು ಕೇಳದೆ ಹಠ ಹಿಡಿಯುತ್ತಿದ್ದರು.

ಸಾಮಾನ್ಯವಾಗಿ ವಾರಾಣಸಿಯ ಜನರು ದಿಕ್ಕಿಲ್ಲದ, ಅನಾಥ ರೋಗಿಗಳನ್ನು ಸೇವಾಶ್ರಮದ ಬಾಗಿಲ ಬಳಿ ಬಿಟ್ಟು ಹೊರಟು ಹೋಗುತ್ತಿದ್ದರು. ಒಮ್ಮೆ ಬಾಬಾ ಆಸ್ಪತ್ರೆಯ ಗೇಟಿನ ಬಳಿ ಕಪ್ಪನೆಯ ಧಡೂತಿ ಮನುಷ್ಯನೊಬ್ಬ ಕರುಣಾಜನಕ ಸ್ಥಿತಿಯಲ್ಲಿ ಪ್ರಜ್ಞೆ ತಪ್ಪಿ ಬಿದ್ದಿರುವುದನ್ನು ಕಂಡರು. ಅಲ್ಲಲ್ಲಿ ಹರಿದ ಉಡುಪು ಧರಿಸಿದ್ದ ಆತನ ಶರೀರ ಮಲಮೂತ್ರಗಳಿಂದ ಕೊಳಕಾಗಿತ್ತು; ದುರ್ನಾತ ಸುತ್ತಲೂ ಹರಡಿತ್ತು. ಆದರೆ ಆಗತಾನೆ ಊಟದ ಗಂಟೆ ಬಾರಿಸಿದ್ದ ಕಾರಣ ಸಾಧುಗಳಾರೂ ಹತ್ತಿರ ಇರಲಿಲ್ಲ. ಆದ್ದರಿಂದ ಬಾಬಾ ಒಬ್ಬರೇ ಹೇಗೋ ಕಷ್ಟಪಟ್ಟು ಕಾವಲುಗಾರನ ಸಹಾಯದಿಂದ ಆತನನ್ನು ಆಸ್ಪತ್ರೆಯ ಆವರಣಕ್ಕೆ ಎತ್ತುಕೊಂಡು ಬಂದು, ಊಟವನ್ನೂ ಮಾಡದೆ ಅವನ ಹತ್ತಿರವೇ ಕಾದು ಕುಳಿತರು. ಎಲ್ಲರೂ ಊಟ ಮುಗಿಸಿ ಹೊರಬಂದರು. ಒಬ್ಬ ಸಾಧುಗಳು ಬನ್‌ಬಾಬಾ ಸಪ್ಪೆ ಮೋರೆ ಹಾಕಿ ಕುಳಿತಿರುವುದನ್ನು ಕಂಡು, "ಏನಾಯಿತು, ಬನು?" ಎಂದು ಕೇಳಿದರು. ನಿಧಾನವಾಗಿ, ಕ್ಷೀಣ ಸ್ವರದಲ್ಲಿ ಉತ್ತರ ಬಂದಿತು, "ನಾನೊಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿರುವೆ. ತೀರ್ಥಯಾತ್ರೆಗೆ ಬಂದ ನನ್ನ ತಂದೆ ಅನಾರೋಗ್ಯದಿಂದ ನರಳುತ್ತಿದ್ದಾರೆ. ನಾನು ಏನೂ ಮಾಡಲಾರದ ಅಸಹಾಯಕ ಸ್ಥಿತಿಯಲ್ಲಿರುವೆ." ಈ ವಿಷಯ ಬಹುಬೇಗನೇ ಹರಡಿ, ಎಲ್ಲರೂ ಸೇರಿ ಕೂಡಲೇ ಆ 'ನಾರಾಯಣ' ನಿಗೆ ಸ್ನಾನ ಮಾಡಿಸಿ, ಬಟ್ಟೆ ಬದಲಾಯಿಸಿ, ಪ್ರಥಮ ಚಿಕಿತ್ಸೆ ನೀಡಿದರು; ಸ್ವಲ್ಪ ಚೇತರಿಸಿದಂತೆ ಕಂಡುಬಂದ ನಂತರ ತಮ್ಮ ತಮ್ಮ ಕರ್ತವ್ಯಗಳ ಕರೆಗೆ ಓಗೊಟ್ಟು ಹೊರಟುಹೋದರು.

ಬಳಿಕ ಸಾಧುಗಳೊಬ್ಬರು ಬಾಬಾ ಬಳಿ ಬಂದು, "ಬನು, ನನಗೊಂದು ಸಂದೇಹ. ನೀನು ಇಷ್ಟು ಬೆಳ್ಳಗಿದ್ದೀಯೆ, ಆದರೆ ನಿನ್ನ ತಂದೆ ಅಷ್ಟು ಕಪ್ಪಾಗಿರುವರಲ್ಲ?" ಎಂದು ಕೇಳಿದರು. ನಾಚಿದ ಬಾಬಾ, "ಈತ ನನ್ನ ತಂದೆಯಲ್ಲ, ಆದರೆ ಅಂತಹ ಧಡೂತಿ ಆಸಾಮಿಯ ಸೇವೆಯನ್ನು ನಾನೊಬ್ಬನೇ ಮಾಡಲಾಗುತ್ತಿರಲಿಲ್ಲ. ನಿಮ್ಮೆಲ್ಲರ ಸಹಾಯ ಬೇಕಾಗಿತ್ತು. ನನ್ನ ತಂದೆ ಎಂದು ನಾನು ಹೇಳದಿದ್ದರೆ ಇಷ್ಟು ಬೇಗ ಎಲ್ಲಾ ಸಾಧುಗಳ ಸಹಾಯಹಸ್ತ ದೊರಕುತ್ತಿತ್ತೆ?" ಎಂದರು. ನಂತರ ಇಬ್ಬರೂ ಸಾಧುಗಳು ಹೃದಯಪೂರ್ವಕವಾಗಿ, ಜೋರಾಗಿ ನಗತೊಡಗಿದರು. ಬಾಬಾರವರ ಜಾಣ್ಮೆ, ಹೃದಯವಂತಿಕೆ ಹಾಗೂ ಸಮಯಪ್ರಜ್ಞೆಗೆ ಈ ಘಟನೆ ಒಂದು ದ್ಯೋತಕ.

ಸೇವಾಶ್ರಮದ ತಿಂಗಳ ಆದಾಯ ಎಲ್ಲರ ಹೊಟ್ಟೆ ತುಂಬುತ್ತಿರಲಿಲ್ಲ. ಆದರೂ, ಸಾಧುಗಳ ಸೇವಾಮನೋಭಾವದಲ್ಲಿ ಯಾವ ಬಗೆಯ ಕೊರತೆಯೂ ಇರುತ್ತಿರಲಿಲ್ಲ. ಸಾಧುಗಳು ಸೇವೆಯಲ್ಲಿ ದಕ್ಷರಾಗಿದ್ದಂತೆ, ಆಧ್ಯಾತ್ಮಿಕ ಸಾಧನೆಯಲ್ಲೂ ಪರಿಣತರಾಗಿದ್ದರು. ಬಾಬಾ ತಮ್ಮ

ದೈನಂದಿನ ದಿನಚರಿಯನ್ನು ಕೊನೆಗಾಲದವರೆಗೆ, ಮುಂದೆ ವೃದ್ಧಾಪ್ಯದಲ್ಲಿ ಕಾಲುಗಳು ಮರಗಟ್ಟಿ ಹೋಗುವವರೆಗೂ, ಆಚರಿಸಿದರು. ಪ್ರಾತಃಕಾಲ ಮೂರು ಗಂಟೆಗೆ ಎದ್ದು ಗಂಗೆಯಲ್ಲಿ ಮಿಂದು, ವಿಶ್ವನಾಥ, ಅನ್ನಪೂರ್ಣ ಮಂದಿರಗಳಿಗೆ ಹೋಗಿ ಅಲ್ಲಿಯೇ ಒಂದೆರೆಡು ಘಂಟೆಗಳ ಕಾಲ ಧ್ಯಾನ ಮಾಡುತ್ತಿದ್ದರು. ನಂತರ ಸೇವಾಶ್ರಮಕ್ಕೆ ಹಿಂತಿರುಗಿ ರೋಗಿನಾರಾಯಣರ ಸೇವೆಯಲ್ಲಿ ತೊಡಗುತ್ತಿದ್ದರು. ಮತ್ತೆ ಸಂಜೆ ಕೇದಾರ್‌ಘಾಟ್‌ಗೆ ಹೋಗಿ ಧ್ಯಾನಕ್ಕೆ ಕುಳಿತುಕೊಳ್ಳುತ್ತಿದ್ದರು. ಒಂದು ದಿನ ಕಿರಿಯ ಸಾಧುಗಳೊಬ್ಬರು ಇವರೊಡನೆ ಕೇದಾರಘಾಟಿಗೆ ಹೋಗಿದ್ದರು. ಎಂದಿನಂತೆ ಕೇದಾರ ಶಿವನ ದರ್ಶನದ ಬಳಿಕ ಗಂಗೆಯ ಬಳಿಯ ಒಂದು ಕಲ್ಲಿನ ಮೇಲೆ ಧ್ಯಾನಕ್ಕೆ ಕುಳಿತರು. ಆದರೆ ಈ ಕಿರಿಯ ಸಾಧುಗಳು ಬಹಳ ಹೊತ್ತು ಕೂರಲಾಗದೆ ಓಡಾಡ ತೊಡಗಿದರು. ಇದಕ್ಕಿದ್ದಂತೆ ಅಲ್ಲೊಂದು ಹಾವು ಬರುತ್ತಿರುವುದನ್ನು ನೋಡಿ ಗಾಬರಿಯಾದರು. ಕೂಗಿದರೆ ತೊಂದರೆಯಾಗುವುದೆಂದು ಮೌನವಾಗಿ ಪ್ರಾರ್ಥನೆ ಸಲ್ಲಿಸುತ್ತಾ ನಿಂತರು. ಹಾವು ಬಾಬಾ ಮೈ ಮೇಲೆ ಹರಿದು ಹೊರಟುಹೋಯಿತು. ಧ್ಯಾನದಿಂದ ಹೊರಬಂದ ಮೇಲೆ ಸಾಧುಗಳು ಬಾಬಾರನ್ನು ಈ ವಿಷಯವಾಗಿ ಕೇಳಿದಾಗ ಅವರು, "ಹಾವಿನ ಬಗ್ಗೆ ನನಗೇನೂ ತಿಳಿದಿಲ್ಲ" ಎಂದುಬಿಟ್ಟರು. ಒಬ್ಬನು ಗಾಢವಾದ ಸಮಾಧಿಯಲ್ಲಿ ಮಗ್ನನಾದಾಗ ಮಾತ್ರವೇ ಸುತ್ತಲಿನ ಹಾಗೂ ತನ್ನ ಶರೀರದ ಪರಿವೆ ಇರದು. ಬಾಬಾ ಅಂತಹ ಸ್ಥಿತಿಯಲ್ಲಿದ್ದರು.

ನಂತರದ ವರ್ಷಗಳಲ್ಲಿ ಬಾಬಾ ರೋಗಿನಾರಾಯಣರ ಗಾಯಗಳ ಶುಶ್ರೂಷೆಯಲ್ಲಿ ನಿರತರಾದರು. ಗಾಯ ಬೇಗ ನಿವಾರಣೆಯಾಗುವಂತಹ, ತಮ್ಮದೇ ಆದ ಔಷಧಗಳನ್ನು ಕಂಡುಹಿಡಿದರು. ಗಾಯಕ್ಕೆ ಪಟ್ಟಿ ಹಾಕುವಾಗ ಅವರು ತೋರುತ್ತಿದ್ದ ಕೈಚಳಕವನ್ನು ನೋಡಿ ವೈದ್ಯರು ಕೂಡ ಬೆರಗಾಗುತ್ತಿದ್ದರು. ಹಳೆಯ ಗಾಯದ ಪಟ್ಟಿಯನ್ನು ತೊಳೆದು, ಒಣಗಿಸಿ, ಕ್ರಿಮಿಗಳಿಲ್ಲದಂತೆ ಸಂಸ್ಕರಿಸಿ ಮತ್ತೆ ಹೊಸ ಪಟ್ಟಿಯಂತೆ ತೆಗೆದಿಡುತ್ತಿದ್ದರು. ಇದೆಲ್ಲವನ್ನೂ ಕೊನೆಯವರೆಗೂ, ಕಾಲುಗಳು ಮರಗಟ್ಟಿ, ನಡೆಯಲಾಗದೆ ಗಾಲಿಕುರ್ಚಿಯಲ್ಲಿ ಸಂಚರಿಸುವಂತಾದರೂ ಕೂಡ ತಾವೇ ಸ್ವತಃ ಮಾಡುತ್ತಿದ್ದರು. **'ನಡೆದಾಡುವ ವಿಶ್ವನಾಥ'** ಎಂದೇ ಜನರು ಅವರನ್ನು ಕರೆಯುತ್ತಿದ್ದರು. ಎಷ್ಟೋ ವೇಳೆ ದಕ್ಷ ಶಸ್ತ್ರವೈದ್ಯರೂ ಕೂಡ ತಮ್ಮ ಕೈಲಾಗದ ಗಾಯಗಳ ಶುಶ್ರೂಷೆಗೆ ರೋಗಿಗಳನ್ನು ಬಾಬಾ ಬಳಿ ಕಳುಹಿಸುತ್ತಿದ್ದರು. ಅದೆಂತಹ ಚಮತ್ಕಾರವಿತ್ತು ಆ ಕೈಗಳಲ್ಲಿ? ಎಂತಹ ಗಾಯವೂ ವಾಸಿಯಾಗಿಬಿಡುತ್ತಿತ್ತು. ಇದೇನು ಕೇವಲ ಔಷಧಿಗಳ ಮಹಿಮೆಯೋ? ಖಂಡಿತವಾಗಿಯೂ ಅಲ್ಲ. ಅದು ಸಾಧ್ಯವಾಗುತ್ತಿದುದು ಬಾಬಾ ಅವರು ಹೊರಸೂಸುತ್ತಿದ್ದ ದೈವಿಕ ಪ್ರೀತಿಯಿಂದ ಎಂದು ಶಸ್ತ್ರವೈದ್ಯರೇ ಹೇಳುತ್ತಿದ್ದರು. ಕೆಲವೊಮ್ಮೆ ಗಾಯಗಳ ದುರ್ನಾತ ತೀವ್ರವಾಗಿ, ನೊಣಗಳು ಮುತ್ತಿರುತ್ತಿದ್ದವು. ಆದರೆ ಬಾಬಾ ದುರ್ನಾತವನ್ನು ಗಣನೆಗೇ ತೆಗೆದುಕೊಳ್ಳದೆ, ನಿರ್ಲಿಪ್ತತೆಯಿಂದ ಮತ್ತು ದಕ್ಷತೆಯಿಂದ ಗಾಯಕ್ಕೆ ಮುತ್ತಿಕೊಂಡ ನೊಣಗಳನ್ನು ತೆಗೆಯುತ್ತಿದ್ದರು. ಶಿವನಿಗೆ ಬಿಲ್ವಪತ್ರೆ ಅರ್ಪಿಸುವಾಗ ಇರುವ ಭಕ್ತಿಭಾವದಷ್ಟೇ ತನ್ಮಯತೆಯಿಂದ ಬಾಬಾ ಗಾಯಕ್ಕೆ ಮುತ್ತಿದ್ದ ಆ ನೊಣಗಳನ್ನು ತೆಗೆದು ಜೀವಂತ ಶಿವನ ಸೇವೆ ಮಾಡುತ್ತಿದ್ದರು!

ಸ್ವಾಮಿ ವಿವೇಕಾನಂದರ ಪಾಲಿಗೆ ಕಾರ್ಖಾನೆ, ಪಾಠಶಾಲೆ, ಹೊಲ– ಇವುಗಳೂ ಸಂನ್ಯಾಸಿಯ ಕುಟೀರ ಮತ್ತು ದೇವಸ್ಥಾನಗಳಷ್ಟೇ ಭಗವಂತನನ್ನು ಸಂಧಿಸುವುದಕ್ಕೆ ಯೋಗ್ಯವಾದ ಸ್ಥಳಗಳು. ಅವರ ದೃಷ್ಟಿಯಲ್ಲಿ ಮಾನವ ಸೇವೆ ಮತ್ತು ಭಗವತ್ ಪೂಜೆಗೂ, ನೈತಿಕತೆ, ಮಾನವೀಯತೆ ಮತ್ತು ಆಧ್ಯಾತ್ಮಿಕತೆಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಈ ಆದರ್ಶವನ್ನು ಪಾಲಿಸಿದ ಬನಬಾಬಾರಂತಹ ಪುಣ್ಯಜೀವಿಗಳು ಇದ್ದುದೇ ಮಾನವಕೋಟಿಗೆ ಒಂದು ವರದಾನ. ತೊಂಭತ್ತು ವರ್ಷದ ಇಳಿವಯಸ್ಸಿನಲ್ಲೂ ತಮ್ಮ ಆರೋಗ್ಯ, ಊಟ, ಆಹಾರಾದಿಗಳನ್ನು ಲೆಕ್ಕಿಸದೆ ಸೇವೆಗೈದ ಬಾಬಾ ಆದರ್ಶಪ್ರಾಯರು.

## ಎಂತಹ ಅಚ್ಚರಿಯ ದೃಶ್ಯ!

ಆಲಂಬಜಾರ್ ಮಠದಲ್ಲಿದ್ದಾಗ ಸ್ವಾಮಿ ಅಖಂಡಾನಂದರಿಗೆ ಮಲೇರಿಯಾ ತಗಲಿತು. ಒಂದು ದಿನ ಕಾಹಿಲೆಯಿಂದ ಮಲಗಿದ್ದಾಗ ಅವರಿಗೊಂದು ಆಧ್ಯಾತ್ಮಿಕ ಅನುಭವವಾಯಿತು. ಇದಕ್ಕಿಂತ ಮುಂಚೆ 'ನಾನೇ ಆತ್ಮ' ಎಂಬ ಅದ್ವೈತಾನುಭವವೇ ಭಗವಂತನ ಬಗೆಗಿನ ಐದು ಬಗೆಯ ದ್ವೈತಭಾವಗಳಿಗಿಂತ ಶ್ರೇಷ್ಠವೆಂದು ಅವರು ನಂಬಿದ್ದರು. ದರ್ಶನದಲ್ಲಿ ಅವರಿಗೆ ಶ್ರೀಕೃಷ್ಣನ ಬೆಳಗುವ ರೂಪ ಕೊಠಡಿಯಲ್ಲಿ ಕಾಣಿಸಿತು; ಕೃಷ್ಣನ ತಾಯಿ ಯಶೋದೆಯ ರೂಪ ತಮ್ಮ ಶರೀರದೊಳಗಿನಿಂದಲೇ ಪ್ರತ್ಯಕ್ಷವಾಯಿತು. ಬಾಲಕೃಷ್ಣನು ಹಸಿವೆಂದು ಹಟ ಮಾಡಲು, ಯಶೋದೆಯು ಹಾಡುತ್ತ, ತನ್ನ ಮುದ್ದುಮಗುವನ್ನು ಆಟವಾಡಿಸುತ್ತ ಸಮಾಧಾನ ಮಾಡತೊಡಗಿದಳು. ನಂತರ ಶ್ರೀರಾಮಕೃಷ್ಣರು ಕಾಣಿಸಿಕೊಂಡು "ನೋಡು, ಎಂತಹ ಅಚ್ಚರಿಯ ದೃಶ್ಯ!" ಎಂದರು. ಅಖಂಡಾನಂದರು ಸಂತೋಷದಿಂದ "ಗುರುವೆ, ನಾನು ನಿರ್ವಾಣವನ್ನು ಬಯಸುವುದಿಲ್ಲ. ಇದು ಬಲು ಆಶ್ಚರ್ಯಕರವಾಗಿದೆ! ನನ್ನ ಈ ಮನಸ್ಥಿತಿಯಲ್ಲಿ ನಾನು ನೂರು ಬಾರಿ ಹುಟ್ಟುವಂತಾದರೂ ಸಂತೋಷದಿಂದ ಬರುವೆ" ಎಂದರು.

**(ಸ್ವಾಮಿ ಅಖಂಡಾನಂದರ ಜಯಂತಿ: ಸೆಪ್ಟೆಂಬರ್ ೨೯)**

